# ಸೇತುಬಂಧ ಸಾಫಲ್ಯ ಪರೀಕ್ಷೆ 2026-27

**ವಿಷಯ: ಕನ್ನಡ ತರಗತಿ: 5ನೇ ಅಂಕಗಳು: 10 ಸಮಯ: 45 ನಿ**

**ವಿದ್ಯಾರ್ಥಿಯ ಹೆಸರು: ____________________ ಹಾಜರಾತಿ ಸಂಖ್ಯೆ: ____________**

---

**ಪ್ರಶ್ನೆ 1: ಕೆಳಗಿನ ವಾಕ್ಯವನ್ನು ಗಮನವಿಟ್ಟು ಓದಿ, ಕೊಟ್ಟಿರುವ ಪ್ರಶ್ನೆಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ:**

"ಹಕ್ಕಿಗಳು ಗೂಡುಗಳನ್ನು ಕಟ್ಟಿ ಮೊಟ್ಟೆ ಇಡುತ್ತವೆ. ಅವು ತೋಟದ ಕೀಟಗಳನ್ನು ತಿನ್ನುವುದರಿಂದ ರೈತರಿಗೆ ಸಹಾಯವಾಗುತ್ತದೆ."

ಪ್ರಶ್ನೆ: ಈ ವಾಕ್ಯದ ಪ್ರಕಾರ, ಹಕ್ಕಿಗಳು ರೈತರಿಗೆ ಹೇಗೆ ಸಹಾಯ ಮಾಡುತ್ತವೆ?

ಅ) ಹಕ್ಕಿಗಳು ರೈತರ ಮನೆಗೆ ಕಾವಲು ಕಾಯುವುದರಿಂದ.

ಆ) ಹಕ್ಕಿಗಳು ತೋಟದ ಕೀಟಗಳನ್ನು ತಿನ್ನುವುದರಿಂದ.

ಇ) ಹಕ್ಕಿಗಳು ಸುಂದರವಾಗಿ ಗೂಡುಗಳನ್ನು ಕಟ್ಟುವುದರಿಂದ.

ಈ) ಹಕ್ಕಿಗಳು ಜೋರಾಗಿ ಕೂಗಿ ಎಲ್ಲರನ್ನೂ ನಿದ್ದೆಯಿಂದ ಎಬ್ಬಿಸುವುದರಿಂದ.

ಉತ್ತರ:____________________________________________

**ಪ್ರಶ್ನೆ 2. ಕೆಳಗಿನ ಪ್ಯಾರಾವನ್ನು ಓದಿ ಪ್ರಶ್ನೆಗೆ ಉತ್ತರಿಸಿ:**

"ಸೀತಾ ಮತ್ತು ಗೀತಾ ಆಟದ ಮೈದಾನದಲ್ಲಿ ನವಿಲು ಹಾರುವುದನ್ನು ನೋಡಿದರು. ಅದರ ಸುಂದರ ಗರಿಗಳನ್ನು ಕಂಡು ಸಂತೋಷಪಟ್ಟರು."

ಪ್ರಶ್ನೆ: ಮೈದಾನದಲ್ಲಿ ಸೀತಾ ಮತ್ತು ಗೀತಾ ಏನನ್ನು ನೋಡಿದರು?

ಉತ್ತರ: ____________________________________________

**ಪ್ರಶ್ನೆ 3. ನಿಮ್ಮ ಊರಿನ ಸಂತೆ /ನಿನ್ನ ನೆಚ್ಚಿನ ಪಕ್ಷಿ ಬಗ್ಗೆ 3 ರಿಂದ 5 ಸರಳ ವಾಕ್ಯಗಳನ್ನು ಬರೆಯಿರಿ.**

ಉತ್ತರ: ____________________________________________

______________________________________________________

______________________________________________________

______________________________________________________

______________________________________________________

**ಪ್ರಶ್ನೆ 4. ನಿಮ್ಮ ತರಗತಿಯಲ್ಲಿ ನಿಮಗೆ ಬರೆಯಲು ಪೆನ್ಸಿಲ್ ಸಿಗುತ್ತಿಲ್ಲ. ಪಕ್ಕದಲ್ಲಿ ಕುಳಿತಿರುವ ನಿಮ್ಮ ಸ್ನೇಹಿತನ ಬಳಿ ಸಹಾಯ ಕೇಳಲು ನೀವು ಬಳಸುವ ಒಂದು ಸರಳ ಕನ್ನಡದ ವಾಕ್ಯವನ್ನು ಬರೆಯಿರಿ.**

ಉತ್ತರ:____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

____________________________________________________________

**ಪ್ರಶ್ನೆ 5. ಕೆಳಗಿನ ಪದ್ಯದ ಸಾಲುಗಳನ್ನು ಹಾವಭಾವ ಹಾಗೂ ಸರಿಯಾದ ಉಚ್ಚಾರಣೆಯೊಂದಿಗೆ ಓದಿರಿ ಮತ್ತು ಖಾಲಿ ಇರುವ ಜಾಗಕ್ಕೆ ಹೊಂದುವ ಸರಿಯಾದ ಪದವನ್ನು ಬರೆಯಿರಿ:**

"ಬಣ್ಣದ ಹಕ್ಕಿ ಸರಸರನೆ ಬಂತು,

ರೆಕ್ಕೆಯ ಬಿಚ್ಚಿ ಮೇಲಕ್ಕೆ ______________."

**ಪ್ರಶ್ನೆ 6. ನಿಮ್ಮ ಶಾಲೆಯ ಗೋಡೆಯ ಮೇಲೆ ಬರೆದಿರುವ ಈ ಕೆಳಗಿನ ಸಾಲನ್ನು ಓದಿ ಅರ್ಥ ಮಾಡಿಕೊಂಡು, ಅದರಿಂದ ನಿಮಗೇನು ತಿಳಿಯಿತು ಎಂಬುದನ್ನು ಒಂದು ಸರಳ ವಾಕ್ಯದಲ್ಲಿ ಬರೆಯಿರಿ:**

"ಸ್ವಚ್ಛತೆಯೇ ಸೇವೆ: ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡಿ, ಕಸವನ್ನು ಕಸದ ಬುಟ್ಟಿಗೇ ಹಾಕಿ."

ಪ್ರಶ್ನೆ: ಈ ಬರಹವನ್ನು ಓದಿದ ನಂತರ ನೀವು ಕಸವನ್ನು ಎಲ್ಲಿ ಹಾಕುತ್ತೀರಿ?

ಉತ್ತರ: ____________________________________________________________

**ಪ್ರಶ್ನೆ 7. ಕೆಳಗಿನ ವಾಕ್ಯದ ಸಂದರ್ಭವನ್ನು ಅರ್ಥಮಾಡಿಕೊಂಡು, ದಪ್ಪ ಅಕ್ಷರದಲ್ಲಿರುವ ಪದದ ಅರ್ಥವನ್ನು ಬರೆಯಿರಿ:**

"ರಾಜನು ತನ್ನ ರಾಜ್ಯದ ಜನರಿಗೆ ಯಾವುದೇ ತೊಂದರೆಯಾಗದಂತೆ ತುಂಬಾ **ದಯೆ**ಯಿಂದ ಆಡಳಿತ ನಡೆಸುತ್ತಿದ್ದನು."

**ಪ್ರಶ್ನೆ: ಈ ವಾಕ್ಯದಲ್ಲಿ ಬಂದಿರುವ 'ದಯೆ' ಎಂಬ ಪದದ ಸರಿಯಾದ ಅರ್ಥವೇನು?**

ಉತ್ತರ: ____________________________________________________________

**ಪ್ರಶ್ನೆ 8. ಈ ಸನ್ನಿವೇಶಕ್ಕೆ ಸಂಬಂಧಿಸಿದಂತೆ ನಿಮ್ಮ ಸ್ವಂತ ಮಾತುಗಳಲ್ಲಿ ಎರಡು ಸರಳ ವಾಕ್ಯಗಳನ್ನು ಬರೆಯಿರಿ.**




ಉತ್ತರ: ____________________________________________

____________________________________________

____________________________________________

____________________________________________

**ಪ್ರಶ್ನೆ 9. "ದಿನನಿತ್ಯ ಯೋಗ ಮಾಡುವುದರಿಂದ ಆರೋಗ್ಯ ಚೆನ್ನಾಗಿರುತ್ತದೆ" - ಈ ಮಾತು ನಿಮಗೆ ಸರಿ ಎನಿಸುತ್ತದೆಯೇ? ನಿಮ್ಮ ಅಭಿಪ್ರಾಯ ಬರೆಯಿರಿ.**

ಉತ್ತರ: ____________________________________________

____________________________________________

____________________________________________

____________________________________________

**ಪ್ರಶ್ನೆ 10. ಒಂದು ಹಳ್ಳಿಯಲ್ಲಿ ರವಿ ಮತ್ತು ಸುಮಾ ಎಂಬ ಇಬ್ಬರು ಸ್ನೇಹಿತರಿದ್ದರು. ಒಂದು ದಿನ ಅವರಿಬ್ಬರು ಶಾಲೆಗೆ ಹೋಗುವಾಗ ರಸ್ತೆಯ ಬದಿಯಲ್ಲಿ ಸಣ್ಣದೊಂದು ಗಾಯಗೊಂಡ ನಾಯಿಮರಿ ಅಳುತ್ತಿರುವುದನ್ನು ನೋಡಿದರು. ತಕ್ಷಣ ಅವರಿಬ್ಬರು..."**

ಪ್ರಶ್ನೆ: ಕಥೆಯ ಮುಂದಿನ ಭಾಗವನ್ನು ವ್ಯಾಕರಣಬದ್ಧವಾಗಿ ಎರಡು ಸರಳ ವಾಕ್ಯಗಳಲ್ಲಿ ಬರೆಯಿರಿ.

ಉತ್ತರ:____________________________________________

____________________________________________

____________________________________________

____________________________________________

# ಸೇತುಬಂಧ ಸಾಫಲ್ಯ ಪರೀಕ್ಷೆ - ಮಾದರಿ ಉತ್ತರಗಳು

ಉತ್ತರ ೧: ಆ) ಹಕ್ಕಿಗಳು ತೋಟದ ಕೀಟಗಳನ್ನು ತಿನ್ನುವುದರಿಂದ.

ಉತ್ತರ ೨: ಮೈದಾನದಲ್ಲಿ ಸೀತಾ ಮತ್ತು ಗೀತಾ ನವಿಲು ಹಾರುವುದನ್ನು ನೋಡಿದರು.

ಉತ್ತರ ೩: ನಮ್ಮ ಊರಿನ ಸಂತೆ ಶನಿವಾರ ನಡೆಯುತ್ತದೆ. ಅಲ್ಲಿ ತರಕಾರಿ ಮಾರುತ್ತಾರೆ. ಜನ ಜಂಗುಳಿ ಇರುತ್ತದೆ.

ಉತ್ತor 5: "ಗೆಳೆಯಾ, ನನ್ನ ಬಳಿ ಪೆನ್ಸಿಲ್ ಇಲ್ಲ, ದಯವಿಟ್ಟು ನಿನ್ನ ಬಳಿ ಇರುವ ಇನ್ನೊಂದು ಪೆನ್ಸಿಲ್ ಕೊಡುತ್ತೀಯಾ?"

ಉತ್ತರ ೫: ಮೇಲಕ್ಕೆ ಹಾರಿತು

ಉತ್ತರ ೬ ಕಸದ ಬುಟ್ಟಿಗೆ

ಉತ್ತರ ೭: ಕರುಣೆ

ಉತ್ತರ ೮: ವಿದ್ಯಾರ್ಥಿಗಳ ಅಭಿವ್ಯಕ್ತಿ

ಉತ್ತರ ೯: ಹೌದು, ಯೋಗ ಮಾಡುವುದರಿಂದ ಮನಸ್ಸು ಮತ್ತು ದೇಹ ಎರಡೂ ಸದೃಢವಾಗಿ ಆರೋಗ್ಯವಾಗಿರುತ್ತದೆ.

ಉತ್ತರ ೧೦: ವಿದ್ಯಾರ್ಥಿಗಳ ಅಭಿವ್ಯಕ್ತಿ